Reg No. B G 155

7-8-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

ಸ್ಥಾಪಕರು: ಅರಮನೆ ಏರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಸೆ.ಸೆ

ಸಹಕಾರ ಚಳವಳಿ ಯಶಸ್ಸಿಗೆ ಮುಖ್ಯಮಂತ್ರಿ ಪಾಟೀಲರ ಕರೆ

ದಿನ್ಯವಾಣಿ

ಸತ್ಯನಿಷ್ಠ ವರದಿ. ನ್ಯಾಯವಾದ ಟೀಕೆ ಪತ್ರಿಕೋದ್ಯಮದ ಮೂಲಮಂತ್ರ.

— ಡಿ. ವಿ. ಗುಂಡಪ್ಪ

9 ಗಂಟೆ ಕಾಲ ಘೇರಾವ್

ಪಾಟ್ನಾ— ತಮ್ಮ ಮಧ್ಯವರ್ತಿ ಪರಿಹಾರದಲ್ಲಿ ಖೋತಾ ಮಾಡಿದ್ದನ್ನು ಪ್ರತಿಭಟಿಸಿ ಚಳವಳಿ ನಡೆಸುತ್ತಿರುವ ಮುನಿಸಿಪಲ್ ಸ್ಕೂಲುಗಳ 1000 ಉಪಾಧ್ಯಾಯರು ಕಾರ್ಪೊರೇಷನ್ ಅಧಿಕಾರಿಗಳನ್ನು ಒಂಭತ್ತು ಗಂಟೆ ಕಾಲ ಘೇರಾವ್ ಮಾಡಿದರು – 18 ಮಹಿಳೆಯರೂ ಸೇರಿ 133 ಉಪಾಧ್ಯಾಯರು ದಸ್ತಗಿರಿ ಮಾಡಲ್ಪಟ್ಟರು.

●

ಸಂಪತ್ತಿನ ಮಿತಿ

ನವದೆಹಲಿ— ಆದಾಯದಲ್ಲೂ ಸಂಪತ್ತಿನಲ್ಲೂ ಜನರಲ್ಲಿರುವ ಅಸಮಾನತೆ ತಗ್ಗಿಸುವ ತಮ್ಮ ನೀತಿಯಲ್ಲಿ ಸರಕಾರವು ಪಟ್ಟಣಿಗರ ಸಂಪತ್ತಿನ ಮೇಲೆ ಮಿತಿ ಹಾಕುವ ವಿಷಯ ಪರ್ಯಾಲೋಚಿಸಲಾಗುತ್ತಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲ್ಪಾಯಿತು.

ವಿದ್ಯಾರ್ಥಿಗಳ ದಾಂಧಲೆ

ಟೋಕಿಯೋ— 100 ವಿಶ್ವವಿದ್ಯಾಲಗಳನ್ನು ಕುಂಠಿಸುವ ಆ ಭಾಗದಲ್ಲಿ ವ್ಯಾಜ್ಯಗಳನ್ನು ಸುಲಭಗೊಳಿಸುವ ಹೊಸ ಶಾಸನ ವಿರುದ್ಧ ಸಹಸ್ರಾರುಗಟ್ಟಲೆ ವಿದ್ಯಾರ್ಥಿಗಳು ಪ್ರದರ್ಶನ ದಡೆಸಿದರು – ವಿದ್ಯಾಸಚಿವಾಲಯಕ್ಕೆ ನುಗ್ಗಲು ತೀವ್ರಗಾಮಿ ಎಡಪಕ್ಷದ ಕೆಲವರು ಹೊರಟರು – 24 ವಿದ್ಯಾರ್ಥಿಗಳ ದಸ್ತಗಿರಿಯಾಗಿದೆ – ಇಬ್ಬರು ಪೋಲೀಸರು ಗಾಯಗೊಂಡರು

★

ಮೈಸೂರಿನ ರಾಜ್ಯಪಾಲರು

ನವದೆಹಲಿ— ಮೈಸೂರಿನ ರಾಜ್ಯಪಾಲರಾಗಿ ಪಶ್ಚಿಮ ಬಂಗಾಳದ ಮಾಜಿ ಗೌರ್ನರರು ನೇಮಿಸಲ್ಪಡುವರೆಂದು ಹೇಳಲಾಗಿದೆ.

★

ಸಹಕಾರ ಚಳವಳ

ಬೀದರ್— ಸಾಲಿಗರ ಭದ್ರವಾದ ಹಿಡಿತದಿಂದ ಬಡ ರೈತರನ್ನು ಉದ್ಧರಿಸುವುದು ಸಹಕಾರ ಚಳವಳವನ್ನು ಜನಪ್ರಿಯಗೊಳಿಸುವುದರಿಂದ ಸಾಧ್ಯವೆಂದು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

ಭ್ರಷ್ಟಾಚಾರ ವಿರುದ್ಧ ದಿನ

ಕಲ್ಲೀಕೋಟೆ— ಭ್ರಷ್ಟಾಚಾರ ವಿರುದ್ಧ ದಿನವನ್ನು ಆಚರಿಸುತ್ತಾ, ಕಲೆಕ್ಟರರ ಆಫೀಸನ್ನು ಪಿಕೆಟ್ ಮಾಡುತ್ತಿದ್ದ ಯುವ ಕಾಂಗ್ರೆಸಿಗರ ಮೇಲೆ ಪೋಲೀಸರು ನಡೆಸಿದ ಲಾಠಿ ಚಾರ್ಜಿನಲ್ಲಿ 30 ಮಂದಿ ಗಾಯಗೊಂಡರು.

★

ದಿನಭತ್ಯ ಹೆಚ್ಚಿಸುವ ಮಸೂದೆ

ನವದೆಹಲಿ— ಪಾರ್ಲಿಮೆಂಟು ಸದಸ್ಯರಿಗೆ ದಿನಭತ್ಯ ರೂ 20 ಹೆಚ್ಚಿಸುವ ಮಸಗದೆಗೆ ನಿನ್ನೆ ಲೋಕಸಭೆಯಲ್ಲಿ ವೋಟು ಮಾಡುವದು ಸಾಧ್ಯವಾಗದೆ ಸಭೆ ಎದ್ದಿತು

★

ಸಾಧುವಿಗೆ ಕಠಿಣ ಸಜ

ಬೊಂಬಾಯಿ— ಕಳೆದ ನವೆಂಬರಿನಲ್ಲಿ ಬೊಂಬಾಯಿನ ಕೋಟ್ಯಾಧೀಶ್ವರರೊಬ್ಬರ ಹೆಂಡತಿಯನ್ನು ಅಪಹರಿಸಿದ ಅಪರಾಧಕ್ಕಾಗಿ 22 ವರ್ಷದ ಸ್ವಾಮಿ ರಾಮೇಶ್ವರಾನಂದರಿಗೆ ಮ್ಯಾಜಿಸ್ಟ್ರೇಟರು 18 ತಿಂಗಳು ಕಠಿಣ ಸಜ ವಿಧಿಸಿದರು.

★

ಪುರಸಭೆ ಕಾರ್ಪೊರೇಷನ್ ಆಗುವದು

ಮೈಸೂರು— ಪುರಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಬಿ. ಪಿ. ಲಿಂಗಯ್ಯನವರು ನಿನ್ನೆ ಪತ್ರಿಕಾ ಗೋಷ್ಠಿಯಲ್ಲಿ ಸಂಯುಕ್ತ ರಂಗವು ಸರಕಾರವು ಒಪ್ಪಲಾರದ ಕಾರ್ಯಗಳನ್ನು ಯೋಜಿಸಿದೆ ವೆಂದರು; ಪುರಸಭೆಯು ಕಾರ್ಪೊರೇಷನ್ ಆಗುವ ಸಂಭವವಿದೆಯೆಂದೂ ಹೇಳಿದರು.

★

ಮೋಟಾರು ರ್ಯಾಲಿ

ಬೊಂಬಾಯಿ— ಪ್ರಪ್ರಥಮ ಅಖಿಲ ಭಾರತ ಮೋಟಾರು ರ್ಯಾಲಿಯನ್ನು ಫೆಬ್ರವರಿ ಮಧ್ಯದಲ್ಲಿ ನಡೆಸಲಾಗುವದೆಂದು ಮೋಟಾರು ಸಂಘದ ಅಧ್ಯಕ್ಷರು ಹೇಳಿದರು.

ಶಾಸನಸಭೆಯ ಹಸ್ತಪತ್ರಿಕೆ ಎಸೆದರು

ತ್ರಿವೇಂದ್ರಂ— ಶಾಸನಸಭೆಯೊಳಗೆ ಪ್ರದರ್ಶನ ನಡೆಸಿ, ಘೋಷಣೆ ಕೂಗುತ್ತಾ ಹಸ್ತಪತ್ರಿಕೆಗಳನ್ನು ಎರೆಚಿದ ಮಲಾಪುರ ವಿರುದ್ಧ ಚಳವಳಿಗಾರರಾದ ಮೋಹ್ಮ ಮತ್ತು ವಸಜಾಕ್ಷರಿಗೆ ಶಾಸನಸಭೆಯು ತಲಾ 2 ತಿಂಗಳು ಜೈಲುವಾಸ ವಿಧಿಸಿತು.

ರೈತ ಸಮ್ಮೇಳನ

ಕೋಲಾರ— ನಶಲ್ಕನೇ ಕರ್ನಾಕಟ ಪ್ರಾಂತ್ಯ ಸಮ್ಮೇಳನದ ಅಂಗವಾಗಿ ಭಾನುವಾರ ಎರಡು ಮೈಲಿ ಉದ್ದದ ಭಾರಿ ಮೆರವಣಿಗೆ ನಡೆಸಲಾಯಿತು – " ಭೂ ಕಂದಾಯ ರದ್ದಾಗಲಿ " ಮುಂತಾದ ಘೋಷಣಗಳನ್ನು ಕೂಗಲಾಗುತ್ತಿತ್ತು.

ಸೋಯಾಬಿ ಎಣ್ಣೆ. ಪುಡಿ ವಶ

ಬೆಂಗಳೂರು— ಮತ್ತಿಕೆರೆಯಲ್ಲಿನ ಒಂದು ಹೋಟಲಿನ ಮೇಲೆ ಸಿ ಐ ಡಿ ಯವರು ಧಾಳಿ ನಡೆಸಿ ರೂ 3500 ಬೆಲೆಯ ಸೋಯಾಬಿ ಎಣ್ಣೆ ಮತ್ತು ಸೋಯಾಬಿ ಪುಡಿ ವಶಪಡಿಸಿಕೊಂಡರು.

ಉಪರಾಷ್ಟ್ರಪತಿ ಮತ್ತು ಸ್ಪೀಕರ್

ನವದೆಹಲಿ— ಉಪರಾಷ್ಟ್ರಪತಿ ಸ್ಥಾನಕ್ಕೆ ಮೈಸೂರು ಗೌರ್ನರ್ ಶ್ರೀ ಪಾಠಕ್ ರನ್ನೂ ಲೋಕಸಭಾ ಸ್ಪೀಕರು ಸ್ಥಾನಕ್ಕೆ ಪಂಜಾಬು ಮಾಜಿ ಸ್ಪೀಕರ್ ಡಿಲಾವರು ಕಾಂಗ್ರೆಸ್ ಪಕ್ಷದ ಉಮೇದುವಾರರು.

ಶಿವಾಜಿಯ ಜರಿ ಚಿತ್ರ

ಅಗ್ರ– 8 ಅಡಿ 5 ಅಂಗುಲದ, ಅಶ್ವಾರೋಹಿ ಯುದ್ದೊತ್ಸಾಹಿ ಶಿವಾಜಿಯ ಚಿತ್ರವನ್ನು ಜರಿಯಲ್ಲಿ ತಯಾರಿಸಲು ಪ್ರಖ್ಯಾತ ಜರಿ ಕೆಲಸಗಾರ ಷೇಕ್‌ಪಂಸುರ್ದಿ ತಯಾರಿಸಲು ನಿರ್ಧರಿಸಿರುವರು — ತಯಾರಿಸಲು ರೂ. 125000 ಖರ್ಚು, 2 ವರ್ಷ ಕಾಲ ಹಿಡಿಯುವದಂತೆ – ಅಂಚುಗಳು ವಜ್ರದಿಂದ ಅಲಂಕೃತವಾಗಿರುವವು.

★

ತಾ. 8–8–69 ನೇ ಶುಕ್ರವಾರದಿಂದ ಅಮೋಘ
... ದಿನ 3 ಪ್ರದರ್ಶನಗಳು .... ಪ್ರಾರಂಭ
ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ
ದಿನ : 2–30, 6 ಮತ್ತು 9–30 ಕ್ಕೆ ದಿನ : 3, 6–30, 10 ಕ್ಕೆ
ವೀನಸ್ ಬ್ರದರ್ಸ್‌ರವರ ನಾಥಿ (ಕಲರ್‌ನಲ್ಲಿ)
ಪಾತ್ರ– ರಾಜೇಂದ್ರಕುಮಾರ್. ವೈಜಯಂತಿಮಾಲಾ, ಪಿಮ್ಮಿ. ಸಂಜೀವ್‌ಕುಮಾರ್
ಸಂಗೀತ : ನೌಷದ್ ನಿರ್ದೇಶನ : ಶ್ರೀಧರ್
ತಾ || 15–8–69 ರಿಂದ — — — ಶ್ರೀ ಟಾಕೀಸಿನಲ್ಲಿ
SHAGIRD [New Print)

ಆಚಾರ್ಯರ ಹೃದಯವಂತಿಕೆ

[" ಲೇಖನ ಕಾವೇರಿ " ಯಿಂದ]

(ಮುಂದುವರಿದುದು)

ನಗಾರಿಯ ಸದ್ದು ಕೇಳುತ್ತಿದ್ದಂತೆಯೇ ಗ್ರಾಮಸ್ಥರು ಮನೆಗಳಿಂದ ಹೊರಬಂದು, ರಾಮಾನುಜರು ಗುಡಿಗೋಪುರ ಏರಿನಿಂತ ವಿಚಿತ್ರ ದೃಶ್ಯವನ್ನು ನೋಡುತ್ತಾ ಕೆಳಗೆ ನೆರೆದರು. ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದಾರೆಂದು ಖಚಿತವಾದ ಮೇಲೆ ರಾಮಾನುಜರು " ಯಾವ ಮಂತ್ರವನ್ನು ಅರ್ಥಮಾಡಿಕೊಳ್ಳುವುದರಿಂದ ನಮ್ಮೆಲ್ಲರಿಗೂ ಮೋಕ್ಷ ದೊರೆಯುತ್ತದೆಯೋ ಅಂಥ ದಿವ್ಯ ಮಂತ್ರವನ್ನು ಈಗ ನಿಮಗೆ ನಾನು ಹೇಳುತ್ತೇನೆ " ಎಂದು ಆ ಮಹಾ ಮಂತ್ರವನ್ನು ಅವರಿಗೆ ವಿವರಿಸಿದರು.

ಕ್ಷಿಪ್ರದಲ್ಲಿಯೇ ಈ ಎಲ್ಲ ಸಂಗತಿಗಳನ್ನೂ ಕೇಳಿದ ನಂಬಿಯವರು ಕೋಪೋದ್ರಿಕ್ತರಾಗಿ ದೇವಾಲಯಕ್ಕೆ ಧಾವಿಸಿಬಂದರು. ರಾಮಾನುಜರು ಲಗುಬಗೆಯಿಂದ ಅವರತ್ತ ನುಗ್ಗಿ ದೀರ್ಘದಂಡ ನಮಸ್ಕಾರ ಮಾಡಿದರು.

ಕೋಪದಿಂದ ಕುದಿಯುತ್ತಿದ್ದ ನಂಬಿ " ಎಲವೋ ಗುರುದ್ರೋಹಿ, ಆಡಿದ ಮಾತನ್ನು ಮುರಿದೆ ಎಂಥ ದುರವಸ್ಥೆ ಪ್ರಾಪ್ತವಾಗುತ್ತದೆಂದು ನಿನಗೆ ತಿಳಿಯದೆ?" ಎಂದು ಗರ್ಜಿಸಿದರು.

ಅತ್ಯಂತ ವೈನ್ಯದಿಂದ ರಾಮಾನುಜರು " ತಿಳಿದಿದೆ ಪ್ರಭೂ ! ರೌರವ ನರಕ ಎಂದು ಉತ್ತರಿಸಿದರು.

ಈ ಪ್ರತ್ಯುತ್ತರದಿಂದ ಇನ್ನಷ್ಟು ಖತಿಗೊಂಡ ನಂಬಿಯವರು " ಶಿಕ್ಷೆಯನ್ನು ತಿಳಿದಿದ್ದೂ ಏಕೆ ಪ್ರತಿಜ್ಞೆ ಮುರಿದೆ ? " ಎಂದು ಗುಡುಗಿದರು.

ರಾಮಾನುಜರು ' ಸ್ವಾಮಿ, ನನ್ನಂಥವನು ಒಬ್ಬ ನರಕಕ್ಕೆ ಹೋಗುವುದರಿಂದ ಹಲವಾರು ಜನ ಮುಕ್ತಿ ಮಾರ್ಗವನ್ನು ಹೊಂದುವುದು ಸಾಧ್ಯವಾಗುವುದಾದರೆ, ಅವರೆಲ್ಲ ಸ್ವರ್ಗಸುಖ ಅನುಭವಿಸಲಿ ಎಂದು, ನಾನು ನರಕಕ್ಕೆ ಬೀಳಲೂ ಸಿದ್ಧನಾಗಿದ್ದೇನೆ " ಎಂದರು.

ಇಂಥ ದಿವ್ಯ ಪ್ರೇಮದ ನುಡಿಗಳನ್ನು ಕೇಳಿದ ನಂಬಿಯವರು ಹರ್ಷೋನ್ಮಾದದಿಂದ ರಾಮಾನುಜರನ್ನು ಹರಿಸಿದರು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ವುಡ್‌ಲ್ಯಾಂಡ್ಸ್ ಜಯಪ್ರದ 2 ನೇ ವಾರ
ಅಮೋಘ ಆರಂಭ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರೆಹೆಮಾನ್, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್– ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 4ನೇ ವಾರ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ರಮಾ, ರಂಗ, ಸತ್ಯ
ದಿನ 3 ಆಟಗಳು

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳಾಹಚ್ಚೆ-ಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press, Chamarajapuram, Mysore 4